# ಡಾ. ಅಂಬೇಡ್ಕರ್‌ರವರ ಸಾಮಾಜಿಕ ಆಲೋಚನೆಗಳು ಅಸ್ಪೃಶ್ಯರ ವಿಮೋಚನೆ

**ಶೋಭಾ ಸುರೇಶ್**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ನಾಗಾರ್ಜುನ ಕಾಲೇಜ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್, ಚಿಕ್ಕಬಳ್ಳಾಪುರ.

**DOI: https://doi.org/10.5281/zenodo.15504651**

## ABSTRACT:

ಸ್ವತಂತ್ರ್ಯಪೂರ್ವ ಭಾರತದ ಜಾತಿ ವ್ಯವಸ್ಥೆಯ ಕರಾಳತೆ ಕಹಿ ಅನುಭವಗಳೊಂದಿಗೆ ಡಾ॥ ಬಿ. ಆರ್. ಅಂಬೇಡ್ಕರ್‌ರವರು ಅಸ್ಪೃಶ್ಯರಿಗೆ ಮೀಸಲಾತಿ ದೊರಕುವಂತೆ ಮಾಡಿದ ಹೋರಾಟದಲ್ಲಿ ಯಶಸ್ಸನ್ನು ಕಾಣುತ್ತಾರೆ. ತಮ್ಮ ಪ್ರತಿಭೆ ಹಾಗೂ ಪರಿಶ್ರಮದಿಂದ ಬದುಕಿನಲ್ಲಿ ಯಶಸ್ಸನ್ನು ಕಂಡರು. ಜಾತಿಯ ಕಾರಣದಿಂದ ಅನೇಕ ಸಂಕಷ್ಟಗಳಿಗೆ ಅವಮಾನಕ್ಕೆ ಗುರಿಯಾಗುತ್ತಾರೆ. ಬದುಕಿನುದ್ದಕ್ಕೂ ಕೆಳವರ್ಗದ ಜನರಿಗಾಗಿ ಹೋರಾಡಿ ಮೀಸಲಾತಿಯ ಮೂಲಕ ಹಿಂದುಳಿದವರನ್ನು ಮುಖ್ಯವಾಹಿನಿಗೆ ತಂದು ಈ ಸೌಲಭ್ಯ ಪಡೆದವರು ತಮ್ಮ ವರ್ಗದವರ ಏಳಿಗೆಗಾಗಿ ಪ್ರಯತ್ನಪಡಬೇಕು ಎಂಬ ಆಶಯವನ್ನು ಹೊಂದಿದ ಅಂಬೇಡ್ಕರ್‌ರವರಿಗೆ ತೀವ್ರ ನಿರಾಸೆಯಾಗುತ್ತದೆ. ಕೆಳ ಸಮುದಾಯಗಳಲ್ಲಿಯೇ ಪರಸ್ಪರ ಆಂತರಿಕ ಭಿನ್ನಾಭಿಪ್ರಾಯಗಳು, ಅಸಮಾನತೆಗಳು, ತಾರತಮ್ಯಗಳ ಕಾರಣಗಳಿಂದ ಪ್ರಬಲ ಜಾತಿಯವರ ದೌರ್ಜನ್ಯದ ವಿರುದ್ಧ ಸಂಘಟಿತರಾಗುವುದು ಸಾಧ್ಯವೇ ಆಗಲಿಲ್ಲವೆಂಬುದು ನಿಜಕ್ಕೂ ದುರಂತವೇ ಸರಿ. ತಮ್ಮ ಜೀವನವನ್ನೇ ಶೋಷಿತ ಜನಾಂಗಗಳ ವಿಮೋಚನೆಗೆ ಧಾರೆ ಎರೆದ ಸಮಾಜಕ್ಕೆ ಮರಳಿ ಸಮಾಜದ ಋಣ ತೀರಿಸಿ ಎಂಬುದು ಅವರ ಕೊನೆಯ ದಿನಗಳ ಹೇಳಿಕೆಯಾಗಿತ್ತು.

## KEYWORDS:

ದಲಿತರು, ಅಸ್ಪೃಶ್ಯತೆ, ಸಫಾಯಿ ಕರ್ಮಚಾರಿಗಳು, ಸಂವಿಧಾನ, ಸಮಾನತೆ, ಮಾನವ ಹಕ್ಕುಗಳು, ಮೀಸಲಾತಿ.

1917ರಿಂದ 1924ರವರೆಗೆ ಅಂಬೇಡ್ಕರ್‌ರವರು ವಿದೇಶಗಳಲ್ಲಿ ಅಂದರೆ ಲಂಡನ್ನಿನಲ್ಲಿ London School of Economics ನಲ್ಲಿ ಅರ್ಥಶಾಸ್ತ್ರ ಪದವಿ ಹಾಗೂ ಬಾರಟ್ ಲಾ ಪದವಿಯನ್ನು 1923ರಲ್ಲಿ ಪಡೆದುಕೊಂಡರು. 1923ರಲ್ಲಿ ಕೊಲಂಬಿಯಾ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ರೂಪಾಯಿಯ ಸಮಸ್ಯೆ ಮತ್ತು ಅದರ ಉಗಮ ಹಾಗೂ ಪರಿಹಾರಗಳು ಎಂಬ ಪ್ರಬಂಧಕ್ಕೆ ಡಾಕ್ಟರ್ ಆಫ್ ಸೈನ್ಸ್ ಎಂಬ ಪದವಿ ಪಡೆದುಕೊಂಡರು. ಆನಂತರ ಭಾರತಕ್ಕೆ ಮರಳಿದ ಅಂಬೇಡ್ಕರ್‌ರವರಿಗೆ ಬ್ರಿಟಿಷ್ ಸರ್ಕಾರ ಬಾಂಬೆಯ ಪ್ರಾಂತೀಯ ಸರ್ಕಾರದ ಶಾಸಕಾಂಗ ಸಭೆಗೆ ನಾಮಕರಣ

ಮಾಡುತ್ತಾರೆ. ಇಡೀ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಅಸ್ಪೃಶ್ಯರ ಸಾಮಾಜಿಕ ಸಂಘರ್ಷಕ್ಕೆ ಮತ್ತು ಅವರ ವಿಮೋಚನೆಗೆ ಮೊದಲ ರಾಜಕೀಯ ಮನ್ನಣೆ ದೊರೆತದ್ದು ಅಂಬೇಡ್ಕರ್‌ಗೆ.

ಈ ಹಿನ್ನೆಲೆಯಲ್ಲಿ ಅಂಬೇಡ್ಕರ್‌ರವರು ಇಡೀ ಸಮುದಾಯವನ್ನು ಎಚ್ಚರಗೊಳಿಸುವ ಕಾರ್ಯಕ್ಕೆ ಕೈ ಹಾಕಿದರು. ಇಡೀ ಭಾರತದಲ್ಲಿ ಸ್ವಾತಂತ್ರಪೂರ್ವದಲ್ಲಿ ಅಸ್ಪೃಶ್ಯರ ಪರಿಸ್ಥಿತಿ ಎಷ್ಟು ಕನಿಷ್ಟವಾಗಿತ್ತು ಎಂಬುದನ್ನು ಅರಿತಿದ್ದ ಅಂಬೇಡ್ಕರ್‌ರವರಿಗೆ ಬ್ರಿಟಿಷ್ ಆಡಳಿತದೊಂದಿಗೆ ನೇರವಾಗಿ ಸಮುದಾಯಕ್ಕೆ ದೊರೆಯಬೇಕಾದ ಸಂಪೂರ್ಣ ಮೀಸಲಾತಿಯ ಸವಲತ್ತನ್ನು ಪಡೆಯುವ ಹಿನ್ನೆಲೆಯಲ್ಲಿ ಅಂಬೇಡ್ಕರ್‌ರವರು ಜೀವನಪರ್ಯಂತ ಅಸ್ಪೃಶ್ಯ ವರ್ಗಗಳ ಪ್ರತ್ಯೇಕ ಚುನಾಯಿಕಗಳನ್ನು ಒದಗಿಸಲು 1919 ರಲ್ಲಿ ಬ್ರಿಟಿಷರಿಂದ ನೇಮಿಸಲ್ಪಟ್ಟ ಸೌತ್ ಬರೋ ಕಮಿಷನ್, 1928ರಲ್ಲಿ ಸೈಮನ್ ಕಮಿಷನ್ ದುಂಡು ಮೇಜಿನ ಪರಿಷತ್, 1930–31ರಲ್ಲಿ ನಡೆದ ಈ ಸಭೆಗಳಲ್ಲಿ ಛಲದಿಂದ ಹೋರಾಟ ಮಾಡಿ ತಳಸಮುದಾಯದ ವ್ಯಕ್ತಿಗಳಿಗೆ ಪ್ರಪ್ರಥಮವಾಗಿ ಮೀಸಲು ಕ್ಷೇತ್ರಗಳನ್ನು ಸೃಷ್ಟಿ ಮಾಡಿಸಿ ಭಾರತದ ರಾಜಕೀಯ ಚರಿತ್ರೆಯಲ್ಲಿ ಹೊಸ ಅಧ್ಯಾಯವೊಂದನ್ನು ಪ್ರಾರಂಭಿಸಿದರು. ಅಂಬೇಡ್ಕರ್‌ರವರು ಸಂವಿಧಾನದ ಮೂಲಕ ಒದಗಿಸಿದ ಹಕ್ಕು ಭಾದ್ಯತೆಗಳ ಸಂರಕ್ಷಣೆಗೆ ಮತ್ತು ಮೀಸಲಾತಿ ಸೌಲಭ್ಯ, ಅಬಲರಿಗೆ ದುರ್ಬಲ ವರ್ಗದವರಿಗೆ ವಿಶೇಷವಾಗಿ ಮಹಿಳೆಯರ ಸ್ವಾತಂತ್ರ್ಯವನ್ನು ರಕ್ಷಿಸಲು ಮಾಡಿದ ಹೋರಾಟವನ್ನು ಸ್ಮರಿಸಿಕೊಂಡು ಅವರ ಆದರ್ಶಗಳನ್ನು ಜನರ ಮನಸ್ಸಿನಲ್ಲಿ ಬೇರೂರಿಸುವ ಜವಾಬ್ದಾರಿ ಮೀಸಲಾತಿ ಪಡೆದ ಫಲಾನುಭವಿಗಳು ಅಧಿಕಾರಿಗಳು, ರಾಜಕಾರಣಿಗಳು, ವಿದ್ಯಾರ್ಥಿಗಳು ಎಲ್ಲಾ ವರ್ಗದವರು ಸಮುದಾಯದ ಬೆಳವಣಿಗೆಗೆ ಕಾರಣರಾಗಬೇಕು ಎಂಬುದು ಅವರ ಅಭಿಪ್ರಾಯವಾಗಿತ್ತು.

ಎಸ್.ಸಿ., ಎಸ್.ಟಿ. ಮೀಸಲಾತಿ ಸವಲತ್ತು ಪಡೆದು ಅಧಿಕಾರಿಗಳಾಗಿದ್ದವರು ತಮ್ಮ ಸಮುದಾಯಕ್ಕೆ ಬಂಡವಾಳವಾಗಬೇಕಿತ್ತು ಆದರೆ ಈ ವಂಚಿತ ವರ್ಗಗಳ ಹಿತಾಸಕ್ತಿಗೆ ಈ ವರ್ಗ ತಮ್ಮ ಶ್ರಮ ಮೀಸಲಿಡುತ್ತಾರೆ ಎಂಬ ಅವರ ನಿರೀಕ್ಷೆ, ಭರವಸೆ ಸುಳ್ಳಾಗಿರುವುದಕ್ಕೆ ನೊಂದುಕೊಂಡಿದ್ದರು. ದಿನಾಂಕ 18–3–1956ರಲ್ಲಿ ಆಗ್ರಾದಲ್ಲಿ ಹೇಳಿದ ಹೇಳಿಕೆ: "ಈ ಸಮುದಾಯದ ವಿದ್ಯಾವಂತರು ನನಗೆ ವಿಶ್ವಾಸದ್ರೋಹವನ್ನು ಬಗೆದಿದ್ದಾರೆ. ಅವರುಗಳು ತಮ್ಮ ಸ್ವಾರ್ಥ ಹಿತ ಸಾಧನೆಯನ್ನು ಮಾಡಿಕೊಳ್ಳುವುದರಲ್ಲಿ ನಿರತರಾಗಿದ್ದಾರೆ." ಈ ರೀತಿಯ ಅಭಿಪ್ರಾಯ ಹೊಂದಲು ಅಂಬೇಡ್ಕರ್‌ರವರು 1951ರ ಸಾರ್ವತ್ರಿಕ ಚುನಾವಣೆಯಲ್ಲಿ ಸೋತಿದ್ದು, ಅಂಬೇಡ್ಕರ್ ಅಭಿಪ್ರಾಯದಂತೆ ದೇಶದಲ್ಲಿ ತಳಸಮುದಾಯದವರು ಬಹುಸಂಖ್ಯಾತರಾಗಿ ಅವರುಗಳಿಗೆ ದಲಿತ ಸಂಘಟನೆಗಳು, ಹೋರಾಟಗಾರರು ಸಮುದಾಯದ ಸಮಸ್ಯೆಗಳನ್ನು ತಳಮಟ್ಟದಿಂದಲೇ

ಜಾಗೃತಗೊಳಿಸಿ ಅವರನ್ನು ಸಮಾಜಮುಖಿಗಳನ್ನಾಗಿ ಮಾಡಬೇಕಿತ್ತು, ಆದರೆ ದಲಿತ ಸಂಘಟನೆಗಳ ಅಸ್ತಿತ್ವ ಪ್ರಾರಂಭವಾಗಿದ್ದೇ 1975ರ ವೇಳೆಗೆ. ದಲಿತ ಸಂಘರ್ಷ ಸಮಿತಿ ಅಸ್ತಿತ್ವಕ್ಕೆ ಬಂದು ಚಳುವಳಿಯ ಸಾಮೂಹಿಕ ನಾಯಕತ್ವವನ್ನು ವಹಿಸಿಕೊಂಡಿತ್ತು. ಈ ಚಳುವಳಿ ಸ್ವಲ್ಪ ಮಟ್ಟಿನ ಪ್ರೇರಕ ಸಂಘಟನೆಯಾಗಿ ಜನಶಕ್ತಿಯಾದರೂ ದಲಿತ ಸಮುದಾಯದ ಅತ್ಯಂತ ತಳಮಟ್ಟದಲ್ಲಿಯೂ ಸ್ವಾಭಿಮಾನದ ಕಿಚ್ಚನ್ನೂ, ಆತ್ಮಗೌರವವನ್ನೂ ಮತ್ತು ಕ್ರೋಢೀಕೃತ ಸಮುದಾಯದ ಪ್ರಜ್ಞೆಯನ್ನು ಬಡಿದೆಬ್ಬಿಸುವಲ್ಲಿ ನಿರ್ಣಾಯಕ ಪಾತ್ರವಹಿಸಿತು. ಸರ್ಕಾರ ಜಾರಿಗೊಳಿಸುವ ಅನೇಕ ಪ್ರಗತಿಪರ ಕಾರ್ಯ್ದೆಗಳನ್ನು, ಅಭಿವೃದ್ಧಿ ಯೋಜನೆಗಳನ್ನು ಜನರಿಗೆ ಮುಟ್ಟಿಸಲು ಸಂಘಟನೆಗಳ ಕಾರ್ಯಕರ್ತರ, ಮುಖಂಡರ ಪಾತ್ರ ಬಹಳ ಮುಖ್ಯವಾಗಿತ್ತು.

ಪ್ರತಿವರ್ಷ ಪರಿಶಿಷ್ಟ ಜಾತಿಯವರ ಕಲ್ಯಾಣಕ್ಕೆ ಮೀಸಲಿಡುವ ಸುಮಾರು 20,000 ಕೋಟಿಯನ್ನು ಯಾವುದೇ ಅಭಿವೃದ್ಧಿ ಇಲಾಖೆಗಳ ಮೂಲಕ ಯೋಜನೆ ಅನುಷ್ಠಾನ ಮಾಡದೆ ಅನುದಾನದ ಹಣವನ್ನು ಸ್ವಾರ್ಥ ಮತ್ತು ಲೋಭದಿಂದ ಕದಿಯಲು ಮತ್ತು ತಮ್ಮ ಸ್ವಹಿತಕ್ಕೆ ಸ್ವಾಹ ಮಾಡುವ ಅವಕಾಶ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದೆ.

ಡಾ. ಅಂಬೇಡ್ಕರ್‌ರವರು 1952 ಮತ್ತು 1956ರಲ್ಲಿ ದುಃಖಿತರಾಗಿ ಈ ವಿದ್ಯಾವಂತ ಜನರ ಸ್ವಾರ್ಥದ ಬಗ್ಗೆ ಮಾತನಾಡಿದ ನುಡಿಗಳು ಇಂದಿಗೂ ಅರ್ಥಪೂರ್ಣವಾಗಿದೆ. ಈ ವರ್ಗದ ಜನರಿಗೆ ನೀಡಬೇಕಾದ ಸವಲತ್ತುಗಳನ್ನು ಕಬಳಿಸುವ ಈ ಶೋಷಕರನ್ನು ಈಗ ನೋಡಿದ್ದರೆ ಏನು ಮಾಡಿಕೊಳ್ಳುತ್ತಿದ್ದರೋ ಗೊತ್ತಿಲ್ಲ!! ಅಂಬೇಡ್ಕರ್ ಕಾಲಘಟ್ಟದಲ್ಲಿ ಅಸ್ಪೃಶ್ಯರು ಅನಕ್ಷರಸ್ಥರಾಗಿ, ಜೀತದಾಳುಗಳಾಗಿ ಗುಲಾಮಗಿರಿಯಲ್ಲಿ ಸನಾತನಿಗಳು ಮನುವಾದಿಗಳು ಮತ್ತು ಜಮೀನ್ದಾರರುಗಳ ದಾಸ್ಯದ ಸಂಕೋಲೆಯಲ್ಲಿ ಬಂಧಿತರಾಗಿದ್ದರು. ಇಂದು ಇನ್ನೊಂದು ರೀತಿಯಲ್ಲಿ ವಿದ್ಯಾವಂತ ಅಧಿಕಾರಿಗಳು, ರಾಜಕಾರಣಿಗಳು, ಮಧ್ಯವರ್ತಿಗಳು, ದಲ್ಲಾಳಿ ಸಮುದಾಯದ ಒಂದು ವರ್ಗದ ಕಪಿಮುಷ್ಠಿಯಲ್ಲಿ ಹೋರಾಡಲಾರದೆ ಬಡತನ ದಾರಿದ್ರ್ಯದಲ್ಲಿಯೇ ನರಳುತ್ತಿರುವುದು ವಾಸ್ತವವಾಗಿದೆ.

ಬೇರೆ ಪ್ರಬಲ ಜಾತಿಗಳವರು ಆಚರಣೆ ಮಾಡುತ್ತಿದ್ದ ಅಸ್ಪೃಶ್ಯತಾ ಪದ್ಧತಿಗಳನ್ನು ಅಂಬೇಡ್ಕರ್‌ರವರ ಪ್ರಯತ್ನದಿಂದ ಬಂದ ಕಾನೂನುಗಳ ಭಯದಿಂದ ಸಾಕಷ್ಟು ಪ್ರಮಾಣದಲ್ಲಿ ಕಡಿಮೆಯಾಗಿದ್ದಿತು. ಆದರೆ ರಾಜ್ಯದ ನೂರಾಒಂದು ಜಾತಿ ಸಮುದಾಯಗಳಲ್ಲಿಯೇ ಅಸ್ಪೃಶ್ಯತೆ ಪರಸ್ಪರ ವೈವಾಹಿಕ ಸಂಬಂಧಗಳು ಹಳ್ಳಿಗಳಲ್ಲೇ ಸಹಭೋಜನ, ಮೇಲು-ಕೀಳು, ಉಚ್ಚ-ನೀಚ, ಬಡವ-ಶ್ರೀಮಂತ, ವಿದ್ಯಾವಂತ - ಅವಿದ್ಯಾವಂತ ಇವರುಗಳಲ್ಲಿಯೇ ಆಂತರಿಕ ಭಿನ್ನಾಭಿಪ್ರಾಯಗಳು, ಅಸಮಾನತೆಗಳು,

ತಾರತಮ್ಯಗಳು ಹೆಚ್ಚಾಗಿ ತಳಸಮುದಾಯದ ಈ ಜಾತಿಗಳು ಅಭಿವೃದ್ಧಿಯನ್ನು ಕಾಣಲು ಸಾಧ್ಯವಾಗುತ್ತಿಲ್ಲ. ಅಂಬೇಡ್ಕರ್‌ರವರು ತಮ್ಮ ಜೀವಿತದವರೆಗೂ ಪ್ರಬಲ ಜಾತಿಗಳ ವಿರುದ್ಧ ಹೋರಾಟದಲ್ಲಿ ಬಹುಮಟ್ಟಿಗೆ ಸಫಲರಾಗಿದ್ದರು. ಆದರೆ ತಳಸಮುದಾಯದ ಒಳಜಗಳಗಳಿಂದಾಗಿ ಅವರ ಕನಸು ಭಗ್ನವಾಗಿದೆ.

ಹೀಗಾಗಿ ಅನುಸೂಚಿತ ಹಿಂದುಳಿದ ಜಾತಿ ಮತ್ತು ಬುಡಕಟ್ಟು ಜನಾಂಗದವರ ಕಲ್ಯಾಣ ಕಾರ್ಯಗಳಿಗೆ ವಿಶೇಷ ಅನುದಾನಗಳ ಶಿಕ್ಷಣ, ವಸತಿ ಇತ್ಯಾದಿ ಸಮಾಜೋದ್ಧಾರ ಕಾರ್ಯಗಳಿಗೆ ಮೀಸಲಿಟ್ಟ ಬಹುಪಾಲು ಹಣ ಅರ್ಹ ಫಲಾನುಭವಿಗಳಿಗೆ ನೀಡದೆ ಅವರಿಗೆ ತಲುಪದೇ ಇರುವುದು ವ್ಯವಸ್ಥೆಯ ದುರಂತವೆನ್ನಬಹುದು. ಅವರ ಮರಣಾನಂತರ ದೇಶವ್ಯಾಪಿ ನೆಲೆಸಿರುವ ಈ ವರ್ಗದ ಕಲ್ಯಾಣ ಕಾರ್ಯಗಳು ಸಮಾಜದಲ್ಲಿ ಅವರು ಬದುಕುತ್ತಿರುವ ರೀತಿ ನಿಸ್ಸಹಾಯಕತನ, ವರ್ಣಿಸಲು ಅಸಾಧ್ಯ. ಮೀಸಲಾತಿಯ ಈ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆಯಾಗಬೇಕು. ಹೀಗೆ ಮಾಡುವುದರಿಂದ ಒಂದಿಷ್ಟು ಜನರಿಗೆ ಅನುಕೂಲವಾಗಬಹುದು. ಒಂದು ಕುಟುಂಬದಲ್ಲಿ ಶಿಕ್ಷಣ, ನೌಕರಿಯಲ್ಲಿ ಸೌಲಭ್ಯಗಳನ್ನು ಪಡೆದು ಐ.ಎ.ಎಸ್, ಉಪನ್ಯಾಸಕರು, ಐಪಿಎಸ್, ಇಂಜಿನ್‌ಯರುಗಳಾದ ನಂತರ ಸೌಲಭ್ಯಗಳನ್ನು ಪಡೆದುಕೊಂಡು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಬಲಿಷ್ಠರಾಗುತ್ತಾರೆ ಅಂತಹ ಕುಟುಂಬಗಳಿಗೆ ಈ ಸೌಲಭ್ಯಗಳನ್ನು ಮಿತಿಗೊಳಿಸಬೇಕು. ಆಗಷ್ಟೇ ಮೀಸಲಾತಿ ಸೌಲಭ್ಯ ಆ ಸಮುದಾಯಗಳಲ್ಲಿ ಕಟ್ಟಕಡೆಯ ವ್ಯಕ್ತಿಯವರೆಗೂ ವಿಸ್ತಾರಗೊಳ್ಳುತ್ತಾ ಹೋಗುತ್ತದೆ.

ನೂರಾ ಒಂದು ಪರಿಶಿಷ್ಟ ಜಾತಿಗಳಲ್ಲಿ ಪರಸ್ಪರ ಭ್ರಾತೃತ್ವದ ಹೊಂದಾಣಿಕೆ ಕುರಿತಂತೆ ಅಂಬೇಡ್ಕರ್‌ರವರು ಹೋರಾಟ ನಡೆಸಿದ್ದರು. ಸಂವಿಧಾನ ರಚಿಸುವ ಸಂದರ್ಭದಲ್ಲಿ ಅವರು ಘೋಷಿಸಿದ ಸಮತೆಯ ಜಯಭೇರಿ ಇಂದು ಯಶಸ್ವಿಯಾಗಿಲ್ಲ. ಅಂದು ಹಳ್ಳಿಗಳಲ್ಲಿ ಹೊಲಗೇರಿ, ಮಾದಿಗರ ಕೇರಿ, ಲಂಬಾಣಿ ತಾಂಡಗಳು, ಬೋವಿ ಕೇರಿಗಳು ಪ್ರತ್ಯೇಕ ಜನತಾ ಕಾಲೋನಿಗಳು ಅಂಬೇಡ್ಕರ್, ಜಗಜೀವನ್‌ರಾಂ ಕಾಲೋನಿಗಳ ಸಂಖ್ಯೆ ಈಗ ಹೆಚ್ಚಾಗುತ್ತಿದ್ದು ಈ ಪರಿಸರದಲ್ಲಿ ಉಚ್ಚ ವರ್ಗದ ಜಾತಿಗಳ ಮನೆಗಳ ಸಂಖ್ಯೆ ಇಲ್ಲವೇ ಇಲ್ಲ ಎನ್ನಬಹುದು. ಈ ವ್ಯತ್ಯಾಸ ಸರಿದೂಗಿಸಲು ಶತಮಾನ ಕಳೆದರೂ ಸಾಧ್ಯವಾಗಲಾರದು. 1975ರಲ್ಲಿ ದೇವರಾಜ್ ಅರಸ್‌ರವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಒಂದು ವಿಶೇಷ ನಿಗಮ ಸ್ಥಾಪಿಸಿದ್ದರು. ಮುಂದಿನ ಸರ್ಕಾರಗಳು ಲಂಬಾಣಿ, ಬೋವಿ, ಆದಿಜಂಬಾವ, ಚಲವಾದಿ ಮತ್ತು ಹೊಲೆಯ ಜಾತಿಗಳಿಗೆ ಪ್ರತ್ಯೇಕ ನಿಗಮಗಳನ್ನು ಸ್ಥಾಪಿಸಿ ಪರಸ್ಪರರನ್ನು ಪ್ರತ್ಯೇಕಗೊಳಿಸಿದ್ದಾರೆ.

ಡಾ. ಅಂಬೇಡ್ಕರ್ ಆಶಯದ ಮಾನವ ಹಕ್ಕುಗಳ ಸಂರಕ್ಷಣೆ ದಮನಿತ ಸಮುದಾಯಗಳಿಗೆ ದೊರೆಯುತ್ತಿದೆಯೇ ಎಂಬ ಪ್ರಶ್ನೆ ಹಾಕಿಕೊಂಡರೆ ಮಾನವ ಹಕ್ಕುಗಳ ಸಂರಕ್ಷಣಾ ಕಾಯಿದೆ ಜಾರಿಗೆ ಬಂದಿದೆ, ಆದರೆ ಎಷ್ಟರ ಮಟ್ಟಿಗೆ ಎಂಬುದು ಪ್ರಶ್ನಾರ್ಹವಾಗಿದೆ. ಸ್ವತಂತ್ರಪೂರ್ವದಲ್ಲಿ ಹಿಂದೂ ಮತ್ತು ಇತರ ಧರ್ಮೀಯರು ತಮ್ಮ ಶ್ರೇಷ್ಠತೆಯನ್ನು ಸಾಬೀತುಪಡಿಸಲು ತಮ್ಮ ಅಧಿಪತ್ಯದ ಸ್ಥಾನಮಾನಗಳನ್ನು ಸ್ಥಾಪಿಸಲು ಕೆಳಜಾತಿಯವರನ್ನು ಗುಲಾಮರನ್ನಾಗಿಸಿದರು. ಇವರ ಮೇಲೆ ಕ್ರೌರ್ಯ, ದೌರ್ಜನ್ಯ ನಡೆಸಿದ್ದಲ್ಲದೇ ಮಾನಸಿಕ ಹಿಂಸೆ ಉಂಟು ಮಾಡಿ ಕ್ರೌರ್ಯ ಮೆರೆದಿದ್ದರು. ಈ ಕೆಳಜಾತಿಯವರು ಪ್ರತಿರೋಧಿಸದೇ ಮೂಕಪ್ರಾಣಿಗಳಂತೆ ಮೂಕರೋಧನೆ ಅನುಭವಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಈ ಜನಗಳ ಸ್ವಾಭಾವಿಕ ಹಕ್ಕುಗಳ ರಕ್ಷಣೆಗೆ 1920ರಲ್ಲಿ ಅಂಬೇಡ್ಕರ್ ಮೂಕನಾಯಕ ಪತ್ರಿಕೆ ಪ್ರಾರಂಭಿಸಿದರು. ಅದರ ಪೂರ್ಣ ಉಸಿರೆಲ್ಲವೂ ಈ ಶೋಷಿತ ಜನರ ಧ್ವನಿಯಾಗಿತ್ತು. ಅವರ ಇನ್ನೊಂದು ಪತ್ರಿಕೆ ಬಹಿಷ್ಕೃತ ಭಾರತ ಕೆಳವರ್ಗದವರನ್ನು ಅಸ್ಪೃಶ್ಯರೆಂದು ಪರಿಗಣಿಸಿದ್ದ ಹಿಂದೂ ಸನಾತನವಾದಿಗಳ ವಿರುದ್ಧ ಈ ಮೂಲಕ ಬರವಣಿಗೆಗಳ ಮಹಾಪೂರವೇ ಹರಿದು ಬಂತು ಜೊತೆಗೆ ತೀವ್ರ ಹೋರಾಟ ಸಾಮೂಹಿಕ ಚಳುವಳಿಯಾಗಿ ರೂಪಗೊಂಡು ಸಂವಿಧಾನದಲ್ಲಿ ಈ ಹಕ್ಕುಗಳ ರಕ್ಷಣೆಗೆ ನಾಂದಿ ಹಾಡಿದರು. ಹೀಗೆ ಹಕ್ಕುಗಳ ಸೇರ್ಪಡೆಗೆ ತಮ್ಮ ಜೀವನವನ್ನೇ ಸಮರ್ಪಿಸಿ ನಿರಂತರವಾಗಿ ಶ್ರಮಿಸಿದ ಶ್ರೇಷ್ಠ ಉದಾತ್ತ, ಮಾನವತಾವಾದಿಯಾಗಿದ್ದರು. ಡಾ. ಅಂಬೇಡ್ಕರ್‌ರವರು ಸ್ವಚ್ಛಭಾರತ ಅಭಿಯಾನದ ರೂವಾರಿಗಳಿಗೆ ಮಾನವ ಘನತೆ ಗಗನ ಕುಸುಮ. ಇಂದಿನ ಸರ್ಕಾರದಲ್ಲಿರುವ ಸ್ವಚ್ಛ ಭಾರತ ಅಭಿಯಾನದ ಕಾರ್ಯಯೋಜನೆಯಲ್ಲಿ ನಿಜವಾದ ಬೆನ್ನೆಲುಬು ಆಗಿರುವ ಮತ್ತು ಹೀರೋಗಳೆಂದು ಬಿಂಬಿಸುವ ಸಫಾಯಿ ಕರ್ಮಚಾರಿಗಳಲ್ಲಿ 95% ರಷ್ಟು ಮಂದಿ ಪರಿಶಿಷ್ಟ ಜಾತಿಗೆ ಸೇರಿದವರಾಗಿರುವುದು. ಈ ದೇಶದ ದೊಡ್ಡ ದುರಂತ. ಇವರು ಮಾಡುವ ಅಸಹ್ಯ ವೃತ್ತಿಯಾದ ಕಸ ಎತ್ತುವುದು, ಕಸ ಗುಡಿಸುವುದು, ದುರ್ವಾಸನೆ ತುಂಬಿದ ಕಸದ ವಿಲೇವಾರಿ, ಸಾಗಾಣಿಕೆ ಮತ್ತು ಬೇರ್ಪಡಿಸುವ ಕೆಲಸಗಳಲ್ಲಿ ಇವರುಗಳು ವಿಪರೀತ ಶೋಷಣೆಗೆ ಒಳಪಟ್ಟಿದ್ದಾರೆ. ಇವರ ಬಗ್ಗೆ ಕನಿಷ್ಠ ಅನುಕಂಪ ಕರುಣೆಯನ್ನು ಯಾವ ನಾಗರಿಕರೂ ತೋರಿಸುವುದಿಲ್ಲ ಜೊತೆಗೆ ಪಾರಂಪರಿಕವಾಗಿ ನಡೆಸಿಕೊಂಡು ಸಹಿಸಿಕೊಂಡು ಬಂದಿರುವ ವೃತ್ತಿಯನ್ನು ಅದೇ ವರ್ಗದವರು ಮಾಡಲಿ ಎಂಬ ಧೋರಣೆ ಬೇರೆ, ಜೊತೆಗೆ ಆ ಕೆಲಸದಲ್ಲಿ ಅವರು ದೈವತ್ವವನ್ನು ಕಂಡುಕೊಳ್ಳುವ ಬಗ್ಗೆ ತತ್ವ ಹೇಳುತ್ತಾರೆ. ಶೌಚಾಲಯ ತೊಳೆಯುವ ಕೆಲಸ, ಸೆಪ್ಟಿಕ್ ಟ್ಯಾಂಕ್ ಸ್ವಚ್ಛಗೊಳಿಸುವ ಕೆಲಸ, ಕಲ್ಯಾಣ ಮಂಟಪಗಳಲ್ಲಿ ಎಂಜಲು ಎಲೆ ಎತ್ತುವ ಕೆಲಸವನ್ನು ಈ ಜಾತಿಯ ಜನರನ್ನು ಬಿಟ್ಟರೆ ಬೇರೆ ಯಾವ ಜಾತಿಯವರೂ ಮಾಡುವುದಿಲ್ಲ.

**ತಳಸಮುದಾಯಗಳ ಕುರಿತಂತೆ ಡಾ. ಅಂಬೇಡ್ಕರ್‌ರವರ ಚಿಂತನೆಯ ಹೊಳಹು:**

ಭಾರತದಲ್ಲಿ ಆಚರಣೆಯಲ್ಲಿರುವ ಅಸ್ಪೃಶ್ಯತಾ ಪದ್ಧತಿಯಿಂದ ವಿಮುಕ್ತಗೊಳಿಸಲು ತಮ್ಮನ್ನು ತಾವು ಸಮರ್ಪಿಸಿಕೊಂಡ ಜಗತ್ತಿನ ಶ್ರೇಷ್ಠ ಮಾನವತಾವಾದಿ ಡಾ॥ ಅಂಬೇಡ್ಕರ್‌ರವರು.

ಬಾಬಾಸಾಹೇಬ್ ಅಂಬೇಡ್ಕರ್‌ರವರು ಬಸವಣ್ಣನವರ ತತ್ವದರ್ಶನಗಳಿಗೆ ಒಂದು ಜ್ಯೋತಿಯಾಗಿ ಸಮಾಜಕ್ಕೆ ಬೆಳಕನ್ನು ನೀಡಿದ್ದಾರೆ. ಶೋಷಿತ ವರ್ಗಗಳ, ಮಹಿಳೆಯರ ಮತ್ತು ಅಬಲರ ಸಬಲೀಕರಣಕ್ಕೆ ಬೇಕಾದ ತಾತ್ವಿಕ ನೀತಿ ಮಾರ್ಗೋಪಾಯಗಳನ್ನು ಸಂವಿಧಾನದ ಮೂಲಕ, ತಮ್ಮ ಬರವಣಿಗೆಗಳ ಮೂಲಕ ಸಮುದಾಯಕ್ಕೆ ನೀಡಿ ಇಂದಿಗೂ ಅಂಬೇಡ್ಕರ್ ಜೀವಂತ ವ್ಯಕ್ತಿಯಾಗಿ ನಮ್ಮ ಮುಂದೆ ನಿಂತಿದ್ದಾರೆ.

ಶ್ರೀಯುತರು 1956 ಜುಲೈ 31ರಂದು ದೆಹಲಿಯಲ್ಲಿ ನಡೆದ ಸಭೆಯೊಂದರಲ್ಲಿ ಹೇಳಿದ ಮಹತ್ವದ ಹೇಳಿಕೆ ಹೀಗಿದೆ. "ನಾನು ಇಲ್ಲಿಯವರೆಗೂ ಮಾಡಿರುವ ಹೋರಾಟ ಮತ್ತು ಸಾಧನೆಯ ಯಶಸ್ಸಿನ ಸಂಪೂರ್ಣ ಫಲವನ್ನು ಅಸ್ಪೃಶ್ಯ ಸಮಾಜದ ಒಂದು ವಿದ್ಯಾವಂತ ವರ್ಗವು ಮಾತ್ರವೇ ಅನುಭವಿಸುತ್ತಿದ್ದಾರೆ. ಆದರೆ ಈ ವರ್ಗದವರು ತಮ್ಮ ಸ್ವಾರ್ಥತೆ ಮತ್ತು ಅಧಿಕಾರ ಲೋಭದಿಂದ ತಮ್ಮ ಸಮುದಾಯದ ಬಡ ಸಹೋದರರ ಬಗ್ಗೆ ಯಾವುದೇ ದಯೆ ಮತ್ತು ಕಾಳಜಿಯನ್ನು ತೋರಿಸದೆ ಅವರನ್ನು ವಂಚಿಸುತ್ತಿರುವುದನ್ನು ನೋಡಿದಾಗ ಅತ್ಯಂತ ನಿರಾಶೆಯಾಗಿದೆ. ಆದ್ದರಿಂದ ಇಡೀ ನನ್ನ ಜೀವನವನ್ನು ದೇಶದ ಅಸಂಖ್ಯಾತ ಅನಕ್ಷರಸ್ಥರು, ದೀನರು, ಹಿಂದುಳಿದವರ ಕಲ್ಯಾಣಕ್ಕೆ ಮುಡುಪಾಗಿಡಲು ಬಯಸುತ್ತೇನೆ." ಹೀಗೆ ತಮ್ಮ ಜೀವನವನ್ನೇ ಶೋಷಿತ ಜನಾಂಗಗಳ ವಿಮೋಚನೆಗೆ ಧಾರೆಯೆರೆದರು. ಹಾಗೆಯೇ ಅವರ ಕೊನೆಯ ದಿನಗಳಲ್ಲಿ ನೀಡಿದ ಹೇಳಿಕೆ "ಸಮಾಜಕ್ಕೆ ಮರಳಿ ಸಮಾಜದ ಋಣ ತೀರಿಸಿ" ಎಂಬುದು ಸಮುದಾಯದ ಪ್ರತಿಯೊಬ್ಬರ ಆತ್ಮಾವಲೋಕನಕ್ಕೆ ಹಿಡಿದ ಕನ್ನಡಿಯಾಗಿದೆ.

21ನೇ ಶತಮಾನದಲ್ಲಿರುವ ನಾವು ಈ ಸಮುದಾಯದ ಒಟ್ಟಾರೆ ಅಭಿವೃದ್ಧಿಯ (ಸ್ವಾತಂತ್ರ್ಯಪೂರ್ವದಿಂದ ಈವರೆಗೆ) ಪ್ರಗತಿ ಗಮನಿಸಿದರೆ ಕೇವಲ ಶೇಕಡಾ 5ರ ಪ್ರಮಾಣಕ್ಕಿಂತ ಕಡಿಮೆಯಲ್ಲಿ ಸರ್ಕಾರಿ ಹುದ್ದೆಗಳಲ್ಲಿರುವುದನ್ನು ಬಿಟ್ಟರೆ ಉಳಿದಂತೆ ಈ ವರ್ಗದ ಸ್ಥಿತಿಗತಿಗಳಲ್ಲಿ ಹೆಚ್ಚಿನ ಬದಲಾವಣೆ ಕಂಡು ಬರುವುದಿಲ್ಲ. ಸುಮಾರು ರಾಜ್ಯದ ವಾರ್ಷಿಕ ಬಜೆಟ್‌ಗಳಲ್ಲಿ 22 ಸಾವಿರ ಕೋಟಿ ಅಂದಾಜು ಹಣವನ್ನು ಈ ವರ್ಗದ ಅಭ್ಯುದಯಕ್ಕೆ ವಿನಿಯೋಗಿಸುತ್ತಿದ್ದ (ಅಂಕಿ ಅಂಶಗಳ ಪ್ರಕಾರ) ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ನಿಗಮಗಳು ಎಲ್ಲಾ ಸೇರಿದರೂ ಅಭಿವೃದ್ಧಿಯ ಫಲಿತಾಂಶ

ನಿರೀಕ್ಷಿತ ಪರಿಮಾಣದಲ್ಲಿ ಆಗಿಲ್ಲ. ಈ ಸಮುದಾಯದ ಒಟ್ಟು ಜನಸಂಖ್ಯೆಯ ಪ್ರಮಾಣದಲ್ಲಿ ಶೇಕಡಾ 85 ಭಾಗಕ್ಕಿಂತ ಹೆಚ್ಚಿನ ಬಡವರು ಅನಕ್ಷರಸ್ಥರು ಇನ್ನೂ ತಳಮಟ್ಟದ ವೃತ್ತಿಗಳಲ್ಲಿ ಕೂಲಿಕಾರ್ಮಿಕರಾಗಿ ಅಸಂಘಟಿತ ವಲಯಗಳಲ್ಲಿ ಸೇರಿಕೊಂಡಿದ್ದಾರೆ.

ಪ್ರಪಂಚದ ಬೇರೆ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದೇಶದ ಜನಸಂಖ್ಯೆ 1/2 ಭಾಗ ಯುವಕರ ಸಂಪನ್ಮೂಲತೆಯಿಂದ ಪ್ರಕಾಶಿಸುತ್ತಿದೆ. ಈ ಯುವಶಕ್ತಿ ಮನಸ್ಸು ಮಾಡಿದರೆ ಭಾರತವನ್ನು ವಿಶ್ವದ ನಂಬರ್ ಒನ್ ರಾಷ್ಟ್ರವನ್ನಾಗಿ ಪರಿವರ್ತಿಸಬಹುದು!

ಸ್ವಾತಂತ್ರ್ಯಪೂರ್ವದಲ್ಲಿ ವಿದ್ಯಾರ್ಥಿಗಳಿಗೆ ಯುವಶಕ್ತಿಗೆ ಆಯ್ಕೆ ಮತ್ತು ಒಟ್ಟಾರೆ ಗುರಿ ಇದ್ದುದು ಬ್ರಿಟಿಷ್ ವಿರುದ್ಧ ನಿಸ್ವಾರ್ಥದಿಂದ ತಮ್ಮ ತ್ಯಾಗ ಬಲಿದಾನಗಳಿಂದ ಹೋರಾಟ ಮಾಡಿ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವುದಾಗಿತ್ತು.

ಆದರೆ 21ನೇ ಶತಮಾನದ ಯುವಶಕ್ತಿಗೆ ತಮ್ಮ ತಮ್ಮ ಭವಿಷ್ಯವನ್ನು ನಿರ್ಮಾಣ ಮಾಡಿಕೊಳ್ಳಲು-ಹಾಳು ಮಾಡಿಕೊಳ್ಳಲು ಡಿಜಿಟಲ್ ಯುಗದಲ್ಲಿ ಅಷ್ಟೇ ಅವಕಾಶಗಳಿವೆ.

ಈ ಹಿನ್ನೆಲೆಯಲ್ಲಿ ಈ ಯುವ ಸಮೂಹಕ್ಕೆ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ದಿನಾಂಕ 16-12-1952ರಂದು ಮುಂಬೈನ ವಿಲ್ಸಿನ್ ಸ್ಟೋನ್ ಕಾಲೇಜಿನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾಡಿದ ಭಾಷಣವು ಸರ್ವಕಾಲಿಕವಾಗಿ ಪ್ರಸ್ತುತವಾಗಿದೆ.

"ಗುಮಾಸ್ತರಾಗಲು ಶಿಕ್ಷಣ ಪಡೆಯಬೇಡಿ, ಜ್ಞಾನವನ್ನು, ಅಭಿರುಚಿಯನ್ನು ತಣಿಸಿಕೊಳ್ಳಲು ವಿದ್ಯಾವಂತರಾಗಿರಿ" ಎಂದು ಹೇಳಿದ ಕಿವಿ ಮಾತನ್ನು ಇಂದಿನ ಪರಿಸ್ಥಿತಿಗೆ ಅನ್ವಯಿಸಿ ವಿಮರ್ಶಿಸಬೇಕಿದೆ.

ಶೋಷಿತವರ್ಗಗಳ ವಿದ್ಯಾವಂತರು ಉದರ ಪೋಷಣೆಗೆ ಸರ್ಕಾರದ ಗುಮಾಸ್ತರಾಗುವುದು ಬೇಡ, ತಮ್ಮ ಬದುಕಲ್ಲಿ ಕಷ್ಟಪಟ್ಟು ವಿದ್ಯೆ ಸಂಪಾದಿಸಿದಂತೆ ಎಲ್ಲಾ ತಳಸಮುದಾಯದ ಮಕ್ಕಳು ಕೇಂದ್ರ ಲೋಕಸೇವಾ ಆಯೋಗ ಮತ್ತು ರಾಜ್ಯಲೋಕಸೇವಾ ಆಯೋಗದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಮೀಸಲಾತಿಯನ್ನು ಕಲ್ಪಿಸಿ ಬೇರೆಯವರಂತೆ ಇವರು ಸಹ ಉನ್ನತ ಹುದ್ದೆಗಳನ್ನು ಪಡೆಯಲು ಅಂಬೇಡ್ಕರ್ ಆಶಿಸಿದ್ದರು. ಭಾರತ ಆಡಳಿತ ಸೇವೆಯಲ್ಲಿ ತಮ್ಮ ಅಸ್ಪೃಶ್ಯಜಾತಿಗೆ ಸೇರಿದವರು ಒಂದು ದಿನ ಆಡಳಿತ ನಡೆಸಬೇಕೆಂಬುದು ಅವರ ಕನಸಾಗಿತ್ತು. ಕೇವಲ ಕೆಳಹಂತದ 'ಡಿ' ಗ್ರೂಪ್, 'ಸಿ' ಗ್ರೂಪ್ ಹುದ್ದೆಗಳಲ್ಲಿ ಮಾತ್ರ ಈ ವರ್ಗದವರು ತುಂಬಿರದೆ, ಸರ್ಕಾರದ ಕಾರ್ಯಾಂಗ, ಶಾಸಕಾಂಗದ ಹಿರಿಯಸ್ಥಾನಗಳಲ್ಲಿ ಅದರಲ್ಲೂ ಅಸ್ಪೃಶ್ಯ

ಬಂಧುಗಳು ತಮ್ಮ ಪ್ರತಿಭೆಯ ಮೂಲಕ ಉನ್ನತ ಸ್ಥಾನಮಾನಗಳಲ್ಲಿ ಕಾರ್ಯನಿರ್ವಹಿಸುವ ಕನಸು ಕಂಡವರಾಗಿದ್ದರು.

ದೀನ ದಲಿತರ ವಿಮೋಚನೆಗೆ ಸ್ವಾತಂತ್ರ್ಯದ ಭಾಗವಾಗಿ ಸಂಘಟಿಸಿ ಅಸ್ಪೃಶ್ಯತಾ ಆಚರಣೆ, ದೀನದಲಿತರಿಗೆ ಹಿಂದುಳಿದ ವರ್ಗದವರಿಗೆ ರಾಜಕೀಯ ಮೀಸಲಾತಿಯ ಜೊತೆಗೆ ಸರ್ಕಾರಿ ಸೇವೆಗಳಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಮೀಸಲಾತಿ ಮತ್ತು ಹಕ್ಕುಗಳ ರಕ್ಷಣೆಗೆ ಸಂವಿಧಾನದಲ್ಲಿ ಶಾಸನಬದ್ಧ ಕಾನೂನಿನ ಚೌಕಟ್ಟನ್ನು ಕಲ್ಪಿಸಿದಂತಹ ವ್ಯಕ್ತಿ ಅಂಬೇಡ್ಕರ್.

**ದೀನದಲಿತರ ಕಣ್ಮಣಿ:**

ಅಂಬೇಡ್ಕರ್ 1917ರಲ್ಲಿ ವಿದೇಶದಲ್ಲಿ ವ್ಯಾಸಂಗ ಮುಗಿಸಿ ಭಾರತಕ್ಕೆ ಮರಳಿ ಬಂದರು. ಮಹಾನ್ ಚಿಂತಕರೂ, ದೂರದೃಷ್ಟಿಯುಳ್ಳ ಅಂಬೇಡ್ಕರ್ 1919ರಲ್ಲಿ ದೇಶದಲ್ಲಿ ಮೊದಲ ಬಾರಿಗೆ ಚುನಾವಣಾ ಮತಾಧಿಕಾರದ ಬಗ್ಗೆ ಅಧ್ಯಯನ ನಡೆಸಲು ಬಂದಿದ್ದ ಸೌತ್ ಬರೋ ಸಮಿತಿಯ ಎದುರಿಗೆ ಹಾಜರಾಗಿ ಅಸ್ಪೃಶ್ಯರು ಮತ್ತು ಶೋಷಿತ ಸಮುದಾಯಗಳಿಗೆ ಮತದಾನದ ಹಕ್ಕನ್ನು ನೀಡಬೇಕೆಂದು ಲಿಖಿತ ಮನವಿ ನೀಡಿದರು. ಅಲ್ಲದೇ ಸಾಮಾಜಿಕವಾಗಿ ಸ್ಪರ್ಶ ಮತ್ತು ಅಸ್ಪೃಶ್ಯರಲ್ಲಿ ಎಂತಹ ತಾರತಮ್ಯವಿದೆ ಎಂಬುದನ್ನು ಧಾರ್ಮಿಕ ನಿಷೇಧಗಳನ್ನು ಹೇರುವ ಮೂಲಕ ಅವರನ್ನು ಗುಲಾಮರಂತೆ ನೋಡಲಾಗುತ್ತಿದೆ, ಹಾಗೆಯೇ ಸಾರ್ವತ್ರಿಕವಾಗಿ ಮನ್ನಿಸಲಾದ ನಾಗರಿಕರ ಹಕ್ಕುಗಳನ್ನು ಸಹಾ ಅವರಿಗೆ ನಿರಾಕರಿಸಲಾಗಿದೆ ಎಂದು ಸಮಿತಿಯ ಮುಂದೆ ವಾದ ಮಂಡನೆ ಮಾಡಿದರು. ಪಾಶ್ಚಿಮಾತ್ಯ ಆಧುನಿಕ ಶಿಕ್ಷಣವನ್ನು ಮತ್ತು ಜಾತಿ ವ್ಯವಸ್ಥೆಯ ಬಗ್ಗೆ ಸುದೀರ್ಘ ಅಧ್ಯಯನ ಮಾಡಿದ್ದ ಇಪ್ಪತ್ತೆಂಟರ ಯುವಕ ಅಂಬೇಡ್ಕರ್‌ರವರ ವಿಚಾರ ಸರಣಿಯನ್ನು ದೇಶದ ಮಹಾನ್ ನಾಯಕರಾದ ಗಾಂಧೀಜಿಯವರಿಂದ ಹಿಡಿದು ನೆಹರು ಮತ್ತು ಬ್ರಿಟಿಷ್ ಆಡಳಿತವೂ ಒಪ್ಪಿ ಮೀಸಲು ಕ್ಷೇತ್ರ ಮತ್ತು ಸಾಮಾನ್ಯ ಕ್ಷೇತ್ರ ಎಂಬ ಜಂಟಿ ಮತಕ್ಷೇತ್ರಗಳ ಮೂಲಕ ಸಂವಿಧಾನದಲ್ಲಿ ಪ್ರಾತಿನಿಧ್ಯ ಹೊಂದಲು ನಾಯಕ ಅಂಬೇಡ್ಕರ್ 1933ರಲ್ಲಿ ಒಪ್ಪಿಕೊಂಡರು. ಹಾಗೂ ಬ್ರಿಟಿಷ್‌ನ ಪ್ರಧಾನಮಂತ್ರಿ ಚರ್ಚಿಲ್‌ರೊಂದಿಗೆ ಸಮಗ್ರವಾಗಿ ಚರ್ಚೆ ನಡೆಸಿದರು. ಈ ಹಿನ್ನೆಲೆಯಲ್ಲಿ ಇದೇ ವರ್ಷ ಅಂಬೇಡ್ಕರ್‌ರವರನ್ನು ಭಾರತೀಯ ಸಂವಿಧಾನ ಸುಧಾರಣಾ ಕುರಿತು ರಚಿಸಿರುವ ಜಂಟಿ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಯಿತು. ಅತೀ ಚಿಕ್ಕ ವಯಸ್ಸಿನಲ್ಲಿಯೇ ಅಂಬೇಡ್ಕರ್‌ರವರು ರಾಷ್ಟ್ರೀಯ ನಾಯಕರ ಪಟ್ಟಿಯಲ್ಲಿ ಸೇರಿದ್ದಲ್ಲದೇ ಸಾಹು ಮಹಾರಾಜರ ನೆರವಿನಿಂದ 'ಮೂಕನಾಯಕ' ಎಂಬ ಪತ್ರಿಕೆ ಪ್ರಾರಂಭಮಾಡಿ ಸಮುದಾಯಗಳಲ್ಲಿ ಜನಜಾಗೃತಿಯನ್ನು ಹೆಚ್ಚಿಸಿ ಕೊಲ್ಲಾಪುರ, ಬೆಳಗಾಂನಲ್ಲಿ ನಿಮ್ನ ವರ್ಗಗಳ ಅಖಿಲ ಭಾರತ ಮಟ್ಟದ ಸಮ್ಮೇಳನಗಳನ್ನು

ಸಂಘಟಿಸುವಲ್ಲಿ ಯಶಸ್ಸನ್ನು ಕಂಡರು.

1926ರಲ್ಲಿ ಮೊಟ್ಟ ಮೊದಲ ಬಾರಿಗೆ ಬಾಂಬೆ ಪ್ರಾಂತೀಯ ಶಾಸಕಾಂಗ ಸಭೆಗೆ ನಾಮಕರಣ ಹೊಂದಿ ಆ ಮೂಲಕ ಅಸ್ಪೃಶ್ಯತಾ ನಿರ್ಮೂಲನಾ ಸಂಘಟನೆಗೆ ಮೊದಲ ರಾಜಕೀಯ ಮನ್ನಣೆ ದೊರೆಯುವಲ್ಲಿ ಕಾರಣೀಕರ್ತರಾದರು. 1927ರಲ್ಲಿ ಚೌಡರ ಕೆರೆಯ ನೀರನ್ನು ಅಸ್ಪೃಶ್ಯರು ಮುಟ್ಟುವ ಚಳುವಳಿ, ಕಾಳರಾಂ ಪಾರ್ವತಿ ದೇವಾಲಯಗಳ ಪ್ರವೇಶ, ಮನುಸ್ಮೃತಿಯನ್ನು ಬಹಿರಂಗವಾಗಿ ಸುಡುವ ಮೂಲಕ ಭಾರತದಲ್ಲಿ ಚಳುವಳಿಯ ಜಾಗೃತಿಯನ್ನು ಮೂಡಿಸಿದರು. 1928ರಲ್ಲಿ ಮೊದಲ ಬಾರಿಗೆ ಸೈಮನ್ ಕಮಿಷನ್ ಮುಂದೆ ವಾದ ಮಂಡಿಸಿ ಹಿಂದೂಗಳಿಂದ ಪ್ರತ್ಯೇಕವಾಗಿ ದಲಿತರನ್ನು ಒಂದು ಪ್ರತ್ಯೇಕ ಜನವರ್ಗವನ್ನಾಗಿ ಮಾಡುವ ಬಗ್ಗೆ ಬ್ರಿಟಿಷ್ ಸರ್ಕಾರವನ್ನು ಒಪ್ಪಿಸಿದ್ದರು. ಹಾಗೂ ಭಾರತದಲ್ಲಿನ ದಲಿತರು ಮತ್ತು ಹಿಂದುಳಿದ ವರ್ಗಗಳ ಸಮಸ್ಯೆಗಳು ಮತ್ತು ಪರಿಹಾರಗಳನ್ನು ಕುರಿತು ಅಧ್ಯಯನ ನಡೆಸಲು ಬಂದ ಸೈಮನ್ ಕಮಿಷನ್‌ಗೆ 60 ಪುಟಗಳ ವರದಿಯನ್ನು ಸಲ್ಲಿಸಿದ್ದು, ಬ್ರಿಟಿಷ್ ಸರ್ಕಾರ ಸದರಿ ವರದಿಯನ್ನು ಯಥಾವತ್ತಾಗಿ ಒಪ್ಪಿತ್ತು. ನಂತರ ಈ ಸಮುದಾಯದವರಿಗೆ ಶಿಕ್ಷಣ ಹಕ್ಕನ್ನು ಸ್ವಾತಂತ್ರ್ಯಪೂರ್ವದಲ್ಲಿ ಕಸಿದುಕೊಳ್ಳಲಾಗಿತ್ತು. 20ನೇ ಶತಮಾನದ ಆರಂಭದಲ್ಲಿ ಸಂವಿಧಾನದ ಮೂಲಕ ಶಿಕ್ಷಣದಲ್ಲಿ ಮೀಸಲು ನೀತಿಯನ್ನು ತರಲು ಶ್ರಮಿಸಿದರು. ಹೀಗಾಗಿ 1970ರ ದಶಕದ ನಂತರವೇ ತಾಂತ್ರಿಕ ಮತ್ತು ಉನ್ನತ ಶಿಕ್ಷಣದಲ್ಲಿ ತಳಸಮುದಾಯದವರಿಗೆ ಶಿಕ್ಷಣದಲ್ಲಿ ಕಡ್ಡಾಯವಾಗಿ ಪ್ರಾತಿನಿಧ್ಯತೆ ದೊರೆಯಿತು.

ದೇಶದ ವಿಶ್ವವಿದ್ಯಾನಿಲಯಗಳು, ಐಐಟಿಗಳು, ನ್ಯಾಷನಲ್ ಸ್ಕೂಲ್ ಆಫ್ ಲಾ ಮುಂತಾದ ಸರ್ಕಾರಿ ಪ್ರಾಯೋಜಿತ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಆ ಸಮುದಾಯದವರಿಗಾಗಿ ಇದ್ದ ಮೀಸಲಾತಿ ಕೋಟಾದಲ್ಲಿ ದೊರೆಯುವ ಸೀಟುಗಳಿಗೆ ಅರ್ಹತೆ ಆಧಾರದಲ್ಲಿ ಪ್ರವೇಶ ಪಡೆಯುವುದು ಸಾಧ್ಯವಾಯಿತು. ಇಲ್ಲಿ ಪ್ರಭಾವಗಳಿಗೆ ಅವಕಾಶವಿಲ್ಲ, ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆಗಳಲ್ಲಿ ಪಡೆಯುವ ಅಂಕಗಳ ಆಧಾರದ ಮೇಲೆಯೇ ಸೀಟು ದೊರೆಯುವುದರಿಂದ ತಳಸಮುದಾಯದ ವಿದ್ಯಾರ್ಥಿಗಳು ಶ್ರಮದಿಂದ, ಆತ್ಮವಿಶ್ವಾಸದಿಂದ, ದೃಢ ನಿಶ್ಚಯದಿಂದ, ಏಕಾಗ್ರತೆಯಿಂದ ತಮ್ಮ ಹೈಸ್ಕೂಲ್ ದಿನಗಳಿಂದ ನಿರ್ದಿಷ್ಟ ಗುರಿಯನ್ನು ಡಾ॥ ಅಂಬೇಡ್ಕರ್‌ರವರಿಂದ ಪಡೆದುಕೊಂಡು ಅವರಂತೆ ವ್ಯಾಸಂಗ ಮಾಡಿದಲ್ಲಿ ತಳಸಮುದಾಯದವರೂ ಸಾಮಾನ್ಯ ಕೋಟಾದಲ್ಲಿ ಸೀಟು ಪಡೆಯುವ ಪ್ರಯತ್ನ ಮತ್ತು ಪ್ರತಿಜ್ಞೆ ಮಾಡಬೇಕು.

ಪ್ರತಿಭಾವಂತ ವಿದ್ಯಾರ್ಥಿಗೆ ಯಾವುದೇ ಪದವಿ ಪಡೆಯಲು ಸಮಾನ ಅವಕಾಶವಿದೆ. ಸರ್ಕಾರದಿಂದ ಜಾರಿಗೊಳಿಸಿರುವ ಅನೇಕ ಯೋಜನೆಗಳಿಂದ

ವಿದ್ಯಾರ್ಥಿನಿಲಯಗಳು, ಬುಕ್ ಬ್ಯಾಂಕ್‌ಗಳು, ಮೂಲಸೌಕರ್ಯಗಳು, ಸ್ಕಾಲರ್ ಶಿಪ್, ಪ್ರೋತ್ಸಾಹಧನ, ವಿದೇಶದಲ್ಲಿ ಕಲಿಯಲು ಅನೇಕ ಯೋಜನೆಗಳಿವೆ.

ಭಾರತ ದೇಶದಲ್ಲಿ 70ರ ದಶಕದ ಪೂರ್ವದಲ್ಲಿಯೇ ತಳಸಮುದಾಯದವರಿಗೆ ತಾಂತ್ರಿಕ, ಉನ್ನತ ಶಿಕ್ಷಣದಲ್ಲಿ ಕಲಿಕೆಗೆ ಅವಕಾಶವಿರಲಿಲ್ಲ, ಆದರೆ ಇಂದಿನ ಪರಿಸ್ಥಿತಿ ಹಾಗಿಲ್ಲ, ಪ್ರತಿಭಾವಂತರಿಗೆ ಹೊರದೇಶದಲ್ಲಿರುವ ವಿಶ್ವವಿಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಓದಲು ರಾಜಮಾರ್ಗಗಳಿವೆ. ಇದಕ್ಕೆ ಬೇಕಾಗಿರುವುದು ಕೇವಲ ಅಂಬೇಡ್ಕರ್‌ರವರಿಗಿದ್ದ ಅಚಲ ವಿಶ್ವಾಸ ಮತ್ತು ಪ್ರತಿಭೆ ಮಾತ್ರ. 25ನೇ ವಯಸ್ಸಿನಲ್ಲಿ ವಿದೇಶದಲ್ಲಿ ವ್ಯಾಸಂಗ ಮಾಡಬಯಸುವ ತಳಸಮುದಾಯದ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಉತ್ತೇಜನವನ್ನು ಕೇಂದ್ರ ಸರ್ಕಾರವೇ ನೀಡುತ್ತದೆ. ಹಾರ್ವರ್ಡ್, ಕೇಂಬ್ರಿಡ್ಜ್, ಆಕ್ಸಫರ್ಡ್ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ದೊರಕಿಸಿಕೊಳ್ಳಲು ಪ್ರತಿಭಾ ಸಾಮರ್ಥ್ಯವೇ ಮಾನದಂಡವಾಗಿರುವುದರಿಂದ ಶೋಷಿತ ವಿದ್ಯಾರ್ಥಿಗಳು ಈ ರೀತಿಯ ಗುರಿಗಳನ್ನು ಹೈಸ್ಕೂಲ್ ಶಿಕ್ಷಣದಿಂದಲೇ ಪ್ರಾರಂಭಿಸಬೇಕು. ಅಂಬೇಡ್ಕರ್ ಜೀವನವನ್ನೇ ಆದರ್ಶವಾಗಿಟ್ಟುಕೊಳ್ಳಬೇಕು.

ಅವರಿಗಿದ್ದ ಪುಸ್ತಕಪ್ರೇಮ, ಜ್ಞಾನದಾಹ ಎಂದಿಗೂ ಕುಗ್ಗದ ಕಲಿಯುವ ಶ್ರದ್ಧೆ ಪದವಿಗಳನ್ನು ಪಡೆಯುವ ದಾಹದಿಂದಾಗಿ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಕಾನೂನು, ರಾಜ್ಯಶಾಸ್ತ್ರ ವಿಷಯಗಳಲ್ಲಿ ವಿಶೇಷ ಪದವಿಗಳನ್ನು ಪಡೆದುಕೊಂಡಿದ್ದರು.

ಎಲ್ಲಾ ವಿದ್ಯಾರ್ಥಿಗಳೂ ಅಂಬೇಡ್ಕರ್ ಆಗಲು ಸಾಧ್ಯವಿಲ್ಲ, ಆದರೆ ಬಾಲ್ಯದಿಂದಲೇ ದಿನಪತ್ರಿಕೆಗಳನ್ನು, ಶಾಲಾಕಾಲೇಜುಗಳಲ್ಲಿ ಸಾರ್ವಜನಿಕ ಗ್ರಂಥಭಂಡಾರಗಳಲ್ಲಿ ಕಡ್ಡಾಯವಾಗಿ ಕುಳಿತು ಓದುವ ಹವ್ಯಾಸ ಬೆಳೆಸಿಕೊಂಡರೆ ಸಾಕು, ಸಮಾಜಕ್ಕೆ ಕೊಡುಗೆ ನೀಡಬಲ್ಲ ವ್ಯಕ್ತಿಯಾಗಿ ರೂಪುಗೊಳ್ಳುವ ಎಲ್ಲಾ ಸಾಧ್ಯತೆಗಳಿವೆ. ಡಿಜಿಟಲ್ ಜಗತ್ತನ್ನು ತಿಳಿದುಕೊಳ್ಳಲೇಬೇಕು. ಆದರೆ ನಿಯಂತ್ರಣ ನಿಮ್ಮಲ್ಲಿರಬೇಕು. ಪುಸ್ತಕಗಳನ್ನು ಆತ್ಮಸಂಗಾತಿಗಳನ್ನಾಗಿ ಮಾಡಿಕೊಳ್ಳಬೇಕು. ಯಾರೇ ಆಗಲಿ ಪ್ರಪಂಚದ ಅನುಭವಗಳನ್ನು ಸ್ವಯಂ ಅನುಭವಿಸಿಯೇ ತಿಳಿದುಕೊಳ್ಳುತ್ತೇನೆ ಎನ್ನುವುದಕ್ಕೆ ಶತಮಾನಗಳ ಆಯುಷ್ಯ ಸಾಲುವುದಿಲ್ಲ. ಆದರೆ ನಿರಂತರ ಓದು ಮನುಷ್ಯನನ್ನು ಜ್ಞಾನಿಯನ್ನಾಗಿ ಮಾಡುತ್ತದೆ.

ಅಂಬೇಡ್ಕರ್ 1952ರಲ್ಲಿ ಪರಿಶಿಷ್ಟ ಜಾತಿ ನೌಕರರ ಸಭೆಯೊಂದರಲ್ಲಿ ಮಾತನಾಡುತ್ತಾ ಈ ರೀತಿ ಹೇಳುತ್ತಾರೆ. “ವಿದ್ಯಾವಂತ ಪರಿಶಿಷ್ಟ ಜಾತಿ ಜನ ತಮ್ಮ ಸಮುದಾಯದ ಬಗ್ಗೆ ಜವಾಬ್ದಾರಿ ವಹಿಸಬೇಕು. ವಿದ್ಯೆ ಅವರನ್ನು ಸಮುದಾಯದಿಂದ ದೂರ ಮಾಡಬಾರದು. ಇಲ್ಲದೇ ಹೋದರೆ ಸಮುದಾಯದಲ್ಲಿ ವಿದ್ಯೆಯ ಬಗ್ಗೆಯೇ ಅಪನಂಬಿಕೆ ಮೂಡಲಾರಂಭಿಸುತ್ತದೆ ಎನ್ನುವ ಎಚ್ಚರಿಕೆಯನ್ನು ವಿದ್ಯಾವಂತ ನೌಕರರಿಗೆ

ನೀಡುತ್ತಾರೆ.

**ಅಂಬೇಡ್ಕರ್ ಬಯಸಿದ್ದ ಸಾಮಾಜಿಕ ಋಣ ಸಂದಾಯದ ಕಲ್ಪನೆ:**

ತಳ ಸಮುದಾಯದಲ್ಲಿ ಸಾಕಷ್ಟು ಒಳಪಂಗಡಗಳಿದ್ದು ಅದರಲ್ಲಿ ಕೆಲವಷ್ಟು ಪಂಗಡಗಳು ಸಂಪೂರ್ಣ ಅಸ್ಪೃಶ್ಯತೆಯನ್ನೇ ಅನುಭವಿಸಿಕೊಂಡು ಬಂದಿದ್ದ ಕೆಲವು ಜಾತಿಗಳು ತಲೆತಲಾಂತರದಿಂದ ಅನೈರ್ಮಲ್ಯ ಮತ್ತು ಸಮಾಜದ ಅತ್ಯಂತ ಹೀನ ವೃತ್ತಿಗಳಲ್ಲಿ ಬಂಧಿಸಿಕೊಂಡಿರುವ ಜಾಡಮಾಲಿಗಳು, ಶೌಚಗುಂಡಿಗಳನ್ನು ಸ್ವಚ್ಛಗೊಳಿಸುವವರು, ಬೀದಿ ಗುಡಿಸುವ ಸಫಾಯಿ ಕರ್ಮಚಾರಿಗಳು, ಟ್ಯಾನರಿಗಳಲ್ಲಿ ಕೆಲಸ ಮಾಡುವವರು, ದೇವದಾಸಿಗಳು ಇಂತಹವರಿಗೆ ಮೀಸಲಾತಿ ಸೌಲಭ್ಯದ ವ್ಯಾಪ್ತಿಗೆ ಒಳಪಟ್ಟರೂ ಅದ್ಯಾವುದರ ಪರಿವೆಯಿಲ್ಲದೆ ಸಮಾಜದ ಮುಖ್ಯವಾಹಿನಿಗೆ ಈವರೆಗೂ ಸೇರಿಕೊಳ್ಳಲು ಸಾಧ್ಯವಾಗದೇ ಇಲ್ಲ ಹಾಗೂ ಆರ್ಥಿಕ ಪಿರಮಿಡ್ಡಿನ ಅತ್ಯಂತ ಕೆಳಹಂತದಲ್ಲಿಯೇ ಇರುತ್ತಾರೆ. ದುರದೃಷ್ಟವೆಂದರೆ ವಿದ್ಯಾವಂತರು ಸಂವಿಧಾನದ ರಕ್ಷಣೆಯ ಅಡಿ ಒದಗಿದ ಸೌಲಭ್ಯಗಳನ್ನು ಪಡೆದು ಉನ್ನತಸ್ಥಾನಮಾನಗಳನ್ನು ಹೊಂದಿ ನಂತರ ತಮಗೆ ಊರುಗೋಲಾದ ಸಮುದಾಯದ ಹೆಸರಲ್ಲಿ ಪಡೆದ ಸವಲತ್ತನ್ನು ಸಂಪೂರ್ಣ ಸ್ವಾರ್ಥಕ್ಕೆ ಬಳಸಿಕೊಳ್ಳುವುದು ನಂತರ ಸಮುದಾಯವನ್ನೇ ಬಿಟ್ಟು ಬದುಕುವುದು ಉಂಡ ಮನೆಗೆ ದ್ರೋಹ ಬಗೆದಂತಾಗುತ್ತದೆ.

ಭಾರತದ ಸಂವಿಧಾನವು ಶೋಷಣೆಗೆ ತುತ್ತಾಗಿರುವವರ, ಅಬಲೆಯರ, ನಿರ್ಗತಿಕರ, ಸಮಾಜದ ನಿರ್ಲಕ್ಷಿತ ಸಮುದಾಯಗಳಿಗೆ, ಬಡತನ ಅನಕ್ಷರತೆ ಮೌಢ್ಯ ಮತ್ತು ನಿರುದ್ಯೋಗದಿಂದ ಬಳಲುವ ಬಹುಸಂಖ್ಯಾತ ಪರಿಶಿಷ್ಟ ಜಾತಿಗಳಿಗೆ ಸೇರಿದವರಾಗಿರುವುದರಿಂದ ಪರಿಶಿಷ್ಟರಲ್ಲೇ ವಿದ್ಯಾವಂತ ಮುಂದುವರೆದವರ ಕಾಳಜಿ ಪ್ರಾಮುಖ್ಯವಾಗಿದ್ದು ಋಣಸಂದಾಯದ ಮಾರ್ಗವಾಗಿದೆ.

ಈ ಹಿನ್ನೆಲೆಯಲ್ಲಿ ಸಮುದಾಯದ ನಿವೃತ್ತ ನೌಕರರು, ವಿದ್ಯಾವಂತರು ಆಯಾ ಪರಿಸರದಲ್ಲಿ ವಾಸಮಾಡುತ್ತಿರುವವರು, ಹತ್ತಿರದಲ್ಲಿರುವ ವಸತಿ ಶಾಲೆಗಳು, ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ವಹಿಸಬೇಕು. ಅಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಲ್ಲಿ ಅಗತ್ಯ ಬೌದ್ಧಿಕ ವಿಕಸನ ಮತ್ತು ವೈಯಕ್ತಿಕ ಸಾಮರ್ಥ್ಯಗಳನ್ನು ವೃದ್ಧಿಸಿಕೊಳ್ಳುವುದರಿಂದ ಹತ್ತನೇ ತರಗತಿ ಮತ್ತು ಪದವಿಪೂರ್ವ ಹಂತದ ಪಿಯುಸಿಯಲ್ಲಿ ತೇರ್ಗಡೆಯಾಗುವ ಪ್ರಮಾಣಕ್ಕಿಂತ ಅನುತ್ತೀರ್ಣರಾಗುವವರ ಸಂಖ್ಯೆಯೇ ಹೆಚ್ಚಾಗಿರುವುದರಿಂದ ಸಮುದಾಯದ ವಿದ್ಯಾವಂತರು ಈ ಕುರಿತು ಗಮನಹರಿಸುವ ಸಾಮಾಜಿಕ ಹೊಣೆಗಾರಿಕೆಯಾಗಿದೆ.

ಈ ಹಿನ್ನೆಲೆಯಲ್ಲಿ ಗ್ರಾಮಮಟ್ಟದಲ್ಲಿ ಎಲ್.ಕೆ.ಜಿ, ಯು.ಕೆ.ಜಿ. ಶಿಕ್ಷಣದಿಂದಲೇ

ನಗರಮಟ್ಟದಲ್ಲಿ ಪೂರ್ವಪ್ರಾಥಮಿಕ ಶಿಕ್ಷಣಗಳಿಂದಲೇ ಮಕ್ಕಳಿಗೆ ಶಿಕ್ಷಣ ದೊರೆತಲ್ಲಿ ಗ್ರಾಮೀಣ ಮಕ್ಕಳು, ನಗರ ಮಕ್ಕಳ ಜೊತೆಯಲ್ಲಿ ಸ್ಪರ್ಧಿಸಲು ಸಾಧ್ಯವಾಗುತ್ತದೆ.

ಈಗ ಸರ್ಕಾರಕ್ಕೆ ಇರುವುದೊಂದೇ ಮಾರ್ಗ : ಹೇಗೂ ಅಂಗನವಾಡಿ ಮಟ್ಟದಿಂದ ಪ್ರಾಥಮಿಕ ಶಿಕ್ಷಣ – ಮಾಧ್ಯಮಿಕ–ಪ್ರೌಢ ಶಿಕ್ಷಣದವರೆಗೆ ಸರ್ಕಾರಿ ಶಾಲೆಗಳಿವೆ. ‘‘ನಿಗದಿತ ಸಂಬಳವಿದೆ’ ಆದರೆ ‘‘ಉನ್ನತ ಶಿಕ್ಷಣ ಹೊಂದಿದವರು ಮಾತ್ರ’’ ಈ ಹಂತದ ಶಿಕ್ಷಣ ಕಲಿಸುವ ಸಾರಥ್ಯ ವಹಿಸಬೇಕು.

ವಿಶೇಷವಾಗಿ ತಾಂತ್ರಿಕ ಶಿಕ್ಷಣ ಪ್ರವೇಶ ಪಡೆಯಲು ಏರ್ಪಡಿಸುವ ಸಾಮಾನ್ಯ ಪ್ರವೇಶ ಪರೀಕ್ಷೆ (CET, NEET) ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಡೆಯುವ ರ್ಯಾಂಕ್‌ಗಳಲ್ಲಿ ಇವರ ಫಲಿತಾಂಶ ನಿರಾಶಾದಾಯಕವಾಗಿರುತ್ತದೆ. ಎಲ್ಲಾ ರೀತಿಯಿಂದಲೂ ಸರ್ಕಾರ ಸೌಲಭ್ಯಗಳನ್ನು ಒದಗಿಸಿದರು ಸದಾ ಶ್ರದ್ಧೆ, ಏಕಾಗ್ರತೆ, ನಿರ್ದಿಷ್ಟ ಗುರಿ, ವಿಶ್ವಾಸವಿಲ್ಲದ ಕಾರಣ ಪ್ರಮುಖವಾಗಿ ಮೊಬೈಲ್‌ಗಳ ಹಾವಳಿಗಳಿಂದ ಕಠಿಣ ಪರಿಶ್ರಮದ ಕೊರತೆಯಿಂದಾಗಿ ಮಕ್ಕಳ ಸಾಧನೆ ಶೂನ್ಯವಾಗುತ್ತಿರುವುದನ್ನು ಕಾಣುತ್ತಿದ್ದೇವೆ.

ಸರ್ಕಾರದ ಆಶ್ರಯದಲ್ಲಿ ಓದುತ್ತಿರುವ ಭವಿಷ್ಯ ನಿರ್ಧಾರಗೊಳ್ಳುವ ಈ ಹಂತದಲ್ಲಿ ವಿದ್ಯಾರ್ಥಿಗಳನ್ನು ಎಚ್ಚರಗೊಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಈ ಕ್ಷೇತ್ರದಲ್ಲಿರುವ ಅನುಭವಿಗಳು, ನುರಿತವರು ಸೇರಿ ಸರ್ಕಾರದ ವ್ಯವಸ್ಥೆಯ ಜೊತೆಗೆ ನಾವೇನು ಮಾಡಬಹುದೆಂಬುವ ಯೋಜನೆ ರೂಪಿಸಿಕೊಳ್ಳಬೇಕು.

ಇಲ್ಲದಿದ್ದಲ್ಲಿ ಶೈಕ್ಷಣಿಕ ಸಬಲೀಕರಣದ ಪಿರಿಮಿಡ್‌ನ ಕೆಳಗಿನ ಅಂತಸ್ತಿನಲ್ಲಿಯೇ ಉಳಿಯುವ ಸಾಧ್ಯತೆ ಹೆಚ್ಚು. ವಿದ್ಯಾರ್ಥಿಗಳು ಎಲ್ಲಾ ರೀತಿಯ ಜ್ಞಾನಸಂಪತ್ತನ್ನು ಪಡೆದು ವಿದ್ಯಾವಂತರಾಗಿ ಸಮಾಜವನ್ನು ಅರ್ಥಪೂರ್ಣವಾಗಿ ಬೆಳೆಸುವ ಕೆಲಸ ಮಾಡಬೇಕಿದೆ.

ತಾನು ಗಳಿಸಿದ ವಿದ್ಯೆ, ಸಂಪತ್ತು, ಅಧಿಕಾರವನ್ನು ಬೇರೆಯವರ ಜೊತೆ ಅದರಲ್ಲೂ ನಿರ್ಗತಿಕರ ಮತ್ತು ಅವಶ್ಯಕತೆ ಇರುವವರ ಜತೆ ಹಂಚಿಕೊಳ್ಳುವ ಹೃದಯ ವೈಶಾಲತೆ ಮತ್ತು ಸುಸಂಸ್ಕೃತ ನಡವಳಿಕೆಗಳನ್ನು ಅಳವಡಿಸಿಕೊಂಡು ಎಲ್ಲರ ಪಾಲಿಗೆ ಹಣತೆಯಾಗಬೇಕು. ಇದು ಅಂಬೇಡ್ಕರ್ ಬಯಸಿದ್ದ ಸಾಮಾಜಿಕ ಋಣಸಂದಾಯ.

**ಪರಾಮರ್ಶನ ಗ್ರಂಥಗಳು:**


1. ಮುನಿಯಪ್ಪ ಎನ್.ಸಿ., (2020), ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಸಾಮಾಜಿಕ ಋಣ ಸಂದಾಯ, ಜನಪ್ರಗತಿ ಪ್ರೆಸ್, ಬೆಂಗಳೂರು.
2. ಮಂಗ್ಳೂರ ವಿಜಯ (ಸಂಗ್ರಹ), (2002), ಸಂಘರ್ಷ: ಅಂಬೇಡ್ಕರ್ ಜೀವನ–ಸಾಧನೆ, ಸಂಬುದ್ಧ ಪ್ರಕಾಶನ, ಬೆಂಗಳೂರು.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.